# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **2223** |
| **ಸದಸ್ಯರ ಹೆಸರು** | **:** | **ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **:** | **26.03.2026** |
| **ಉತ್ತರಿಸಬೇಕಾದ ಸಚಿವರು** | **:** | **ಉಪ ಮುಖ್ಯಮಂತ್ರಿರವರು** |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣವಾಗಿರುವ ಬಡಾವಣೆ ವ್ಯಾಪ್ತಿಯಲ್ಲಿ ಬಡಾವಣೆ ನಿರ್ಮಾಣಕ್ಕೂ ಮುನ್ನ ಬಡಾವಣೆ ನಿರ್ಮಾಣದ ನಂತರ ಅಧಿಸೂಚನೆಯಿಂದ ಹೊರಗುಳಿದ ಭೂಮಿಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶಕ್ಕೆ ಬಳಕೆ ಮಾಡಲು ಇರುವ ನಿಬಂಧನೆಗಳು ಯಾವುವು; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಡಾವಣೆ ನಿರ್ಮಾಣಕ್ಕೂ ಮುನ್ನ ಹಾಗೂ ಬಡಾವಣೆ ನಿರ್ಮಾಣದ ನಂತರ ಭೂಸ್ವಾಧೀನ ಅಧಿಸೂಚನೆಯಿಂದ ಹೊರಗುಳಿದ ಭೂಮಿಯನ್ನು ಚಾಲ್ತಿಯಲ್ಲಿರುವ ಮಹಾಯೋಜನೆಯಲ್ಲಿ ನಿಗದಿಪಡಿಸಿದ ಭೂ ಉಪಯೋಗಕ್ಕನುಗುಣವಾಗಿ ಬಳಕೆ ಮಾಡಿಕೊಳ್ಳಬೇಕಾಗಿರುತ್ತದೆ. |
| (ಆ) | ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ-1, ಅಂಜನಾಪುರ ಗ್ರಾಮದ ಸರ್ವೆ ನಂ. 49, 82 ಮತ್ತು 86 ಬಿಡಿಎ ಭೂಸ್ವಾಧೀನದಿಂದ ಕೈಬಿಡಲಾಗಿದೆಯೇ; ಕೈಬಿಡಲಾಗಿದ್ದರೆ ಸದರಿ ಭೂಮಿಯು ಯಾವ ವಲಯದಲ್ಲಿದೆ; ಸದರಿ ಭೂಮಿಯನ್ನು ಯಾವ ಉದ್ದೇಶಕ್ಕೆ ಉಪಯೋಗಿಸಲಾಗುತ್ತಿದೆ. | • ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ-1, ಅಂಜನಾಪುರ ಗ್ರಾಮದ ಸರ್ವೆ ನಂ.49ರ ಜಮೀನು ಪೋಡಿಯಾಗಿದ್ದು, ಸರ್ವೆ ಸರ್ವೆ ನಂ.49 ರ ಪೈಕಿ 02 ಎಕರೆ 35 ಗುಂಟೆ, ಸರ್ವೆ ನಂ. 49/4ರಲ್ಲಿ 0-30 ಗುಂಟೆ, ಸರ್ವೆ ನಂ.49/11ರಲ್ಲಿ 01ಎಕರೆ 14ಗುಂಟೆ, ಸರ್ವೆ ನಂ.49/14(ಪಿ)ರಲ್ಲಿ 03ಎಕರೆ 19ಗುಂಟೆ ಮತ್ತು ಸರ್ವೆ ನಂ.49/17ರಲ್ಲಿ 01ಎಕರೆ 22ಗುಂಟೆ ಜಮೀನನ್ನು ನ್ಯಾಯಾಲಯದ ಆದೇಶದಂತೆ ಭೂಸ್ವಾಧೀನದಿಂದ ಕೈಬಿಡಲಾಗಿದೆ.<br><br>• ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಅಂಜನಾಪುರ ಗ್ರಾಮದ ಸರ್ವೆ ನಂ.49ರ ಜಮೀನು ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದು, ಅನುಮೋದನೆಗೊಂಡ ಮಹಾಯೋಜನೆಯಂತೆ ಬಹುಭಾಗ ವಸತಿ, ಭಾಗಶಃ ವಾಣಿಜ್ಯ, ಸ್ವಲ್ಪಭಾಗ ಉದ್ಯಾನವನ, ಬಯಲುಜಾಗ ಮತ್ತು ಸ್ವಲ್ಪಭಾಗ ನೈಸ್ ಪೆರಿಫೆರಲ್ ರಿಂಗ್ ರಸ್ತೆ ಎಂದು ವರ್ಗೀಕರಿಸಿ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿರುತ್ತದೆ. |

---2

| | | |
|---|---|---|
| | | • ಕೆಂಗೇರಿ ಹೋಬಳಿ-1, ಅಂಜನಾಪುರ ಗ್ರಾಮದ ಸರ್ವೆ ನಂ.82 & 86ರ ಜಮೀನುಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪರಿಷ್ಕೃತ ಮಹಾಯೋಜನೆ (RMP-2015)-2015 ರಲ್ಲಿ ವಸತಿ ವಲಯದಲ್ಲಿದ್ದು, ಅನುಮೋದಿತ ಬಡಾವಣೆ ನಕ್ಷೆಯಂತೆ ಈ ಜಮೀನುಗಳಲ್ಲಿ ಪ್ರಾಧಿಕಾರದಿಂದ ಅಂಜನಾಪುರ ವಸತಿ ಯೋಜನೆಗಾಗಿ ನಿವೇಶನಗಳನ್ನು ರಚಿಸಲಾಗಿದೆ. |
| (ಇ) | ವಸತಿ ಪ್ರದೇಶದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ವಾಣಿಜ್ಯ ಚಟುವಟಿಕೆ ನಡೆಸಲು ಅವಕಾಶವಿದೆಯೇ; ಇದ್ದರೆ ಯಾವ ನಿಯಮಾವಳಿಗಳಡಿಯಲ್ಲಿ ಅವಕಾಶವಿದೆ (ನಿಯಮದ ಪ್ರತಿಯನ್ನು ನೀಡುವುದು) | ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಅವಕಾಶವಿರುವುದಿಲ್ಲ. |
| ಈ) | ಸದರಿ ಸರ್ವೆ ನಂಬರ್ ಗಳನ್ನು ವಾಣಿಜ್ಯ ಚಟುವಟಿಕೆ ಉಪಯೋಗಿಸಲು ಅನುಮತಿ ನೀಡಿದ್ದರೆ ಅನುಮತಿ ಪತ್ರದ ಪ್ರತಿಯನ್ನು ನೀಡುವುದು; | ವಾಣಿಜ್ಯ ಚಟುವಟಿಕೆಗೆ ಯಾವುದೇ ಅನುಮತಿ ಪತ್ರ ನೀಡಿರುವುದಿಲ್ಲ. |
| ಉ) | ಸದರಿ ಸರ್ವೆ ನಂಬರ್ ಮಾಲೀಕರು ವಾಣಿಜ್ಯ ಚಟುವಟಿಕೆ ನಡೆಸುತ್ತಿರುವುದಕ್ಕೆ ಸರ್ಕಾರಕ್ಕೆ ವಾರ್ಷಿಕವಾಗಿ ಪಾವತಿಸುತ್ತಿರುವ ತೆರಿಗೆ ಎಷ್ಟು? | |

**ಸಂಖ್ಯೆ: ನಅಇ 160 ಬೆಂಅಸೇ 2026(ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ